ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು),—

ಅ) ಈ ಯೋಜನೆಯ ಅಂದಾಜು ಪಟ್ಟಿಗೆ ಇನ್ನೂ ಆಡಳಿತಾತ್ಮಕ ಅನುಮೋದನೆ ದೊರೆತಿಲ್ಲದ ಕಾರಣ ಜಮೀನು ಸ್ವಾಧೀನದ ಕೆಲಸವನ್ನು ಇನ್ನೂ ಪ್ರಾರಂಭಿಸಿಲ್ಲ.

ಆ) ಮತ್ತು ಇ) ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ದೊರೆತ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಲ್ಲನಗೌಡ ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೆ, ರಾಶಿಂಗ್ ಹಾಗೂ ಬೋರ್‌ಗಲ್ ಕೆರೆ ಸುಮಾರು ೨೫–೩೦ ವರ್ಷಗಳಿಂದ ಇದೇ ಸ್ಥಿತಿಯಲ್ಲಿದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದು ಏನೆಂದರೆ, ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಯಾರು ಕೊಡಬೇಕಾಗಿದೆ. ಯಾರಿಂದ ಸಿಗಬೇಕಾಗಿದೆ, ಇಷ್ಟು ತಡವಾಗಲಿಕ್ಕೆ ಕಾರಣವೇನು ಗಡಿ ಭಾಗದಲ್ಲಿರುವವರು ನಾವು ಮಹಾರಾಷ್ಟ್ರದವರು ಕರ್ನಾಟಕ ಪರಿಸ್ಥಿತಿಯನ್ನು ನಮ್ಮನ್ನು ಕಂಪೇರ್ ಮಾಡುತ್ತಾರೆ. ಆದುದರಿಂದ ದಯವಾಡಿ ಇದು ಗಡಿ ಭಾಗದಲ್ಲಿ ಬರತಕ್ಕಂಥ ಕೆರೆ ಇರುವುದರಿಂದ ಇದಕ್ಕೆ ವಿಶೇಷ ಆದ್ಯತೆ ಕೊಟ್ಟು ಈ ವರ್ಷದ ಕೆಲಸದಲ್ಲಿ ಪ್ರಾರಂಭ, ಮಾಡುವುದಕ್ಕೆ ಕಾರ್ಯಕ್ರಮ ಸಿಗೆದುಕೊಳ್ಳುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ,—ಇದು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುತ್ತದೆ. ಅವರೇ ಇದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಬೇಕು. ಆದಷ್ಟು ಬೇಗ ಕೊಡಲಿಕ್ಕೆ ನಾನು ಸೂಚನೆ ಕೊಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್,—ಇದು ಅಲ್ಲಿಂದ ಬಂದು ರಾಜ್ಯಮಟ್ಟದಲ್ಲಿ ಪೆಂಡಿಂಗ್ ಇದೆ. ಇದನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟುಬಿಟ್ಟಿದ್ದಾರೆ. ಮೊದಲು ಸರ್ಕಾರದ್ದು ಇತ್ತು, ಆಮೇಲೆ ಮೈನರ್ ಇರಿಗೇಷನ್ ಬಂತು ಆಮೇಲೆ ಮೇಜರ್ ಇರಿಗೇಷನ್ ಬಂತು ಆಮೇಲೆ ಈಗ ಜಿಲ್ಲಾ ಪರಿಷತ್ತಿಗೆ ಹೋಗತ್ತಾ ಇದೆ, ಇದನ್ನು ಏನಾದರೂ ಸ್ಪೆಷಲ್ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಕೊಟ್ಟು ಮಾಡಬೇಕು. ಸುಮಾರು ೨೦ ಲಕ್ಷಕ್ಕೆ ಮೇಲ್ಪಟ್ಟು ಇರತಕ್ಕಂಥ ಸ್ಕೀಂಗಳಿವು. ಇದು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಆಗಲಿಕ್ಕಿಲ್ಲ. ಆದುದರಿಂದ ದಯವಾಡಿ ಇದನ್ನು ಸ್ಪೆಷಲ್ ಮೈನರ್ ಇರಿಗೇಷನ್‌ಗೆ ವಹಿಸತಕ್ಕಂಥ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ..—ಜಿಲ್ಲಾ ಪರಿಷತ್ತಿಗೆ ವಹಿಸಿದ ಕೆಲಸಗಳನ್ನು ನಾವು ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ. ಆದರೆ ಆದಷ್ಟು ಬೇಗ ಅವರು ತೆಗೆದುಕೊಳ್ಳಲಿಕ್ಕೆ ಸೂಚನೆ ಕೊಡುತ್ತೇನೆ ಮತ್ತು ಬೇಗ ಮಾಡಲಿಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಹೆಂಡಸಗೇರಿಯವರ ಪ್ರಶ್ನೆಯನ್ನು ಮಾನ್ಯ ಕೆ.ಎಚ್. ಪಾಟೀಲ್‌ರವರು ಕೇಳಬಹುದು.

ಕೆ. ಎಂ. ಸಿ. ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆಗಳನ್ನು ಭರ್ತಿಮಾಡುವುದು

೩೭. ಶ್ರೀ ಎ. ಎಂ. ಹೆಂಡಸಗೇರಿ (ಹುಬ್ಬಳ್ಳಿ).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿನ ಕೆ. ಎಂ. ಸಿ. ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು, ಖಾಲಿ ಇರುವ ವೈದ್ಯರುಗಳ ಸಂಖ್ಯೆ ಎಷ್ಟು (ಪೂರ್ಣ ವಿವರ ನೀಡುವುದು)?

ಆ) ಸದರಿ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರುಗಳ ಹುದ್ದೆಗಳನ್ನು ಯಾವಾಗ ನೇಮಕಾತಿ ಮಾಡಲಾಗುವುದು ?

ಇ) ಹುಬ್ಬಳ್ಳಿಯ ಕೆ. ಎಂ. ಸಿ. ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜಿಗೆ ೧೯೮೬–೮೭ ರಿಂದ ೧೯೮೮–೮೯ರವರೆಗೆ ಬಿಡುಗಡೆ ಮಾಡಿದ ಅನುದಾನ ಹಣವಷ್ಟು (ಪ್ರತಿ ವರ್ಷದ ವಿವರ ನೀಡುವುದು.)

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ಕೆ. ಎಂ. ಸಿ. ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳ ಸಂಖ್ಯೆ ೧೩೬, ಖಾಲಿ ಇರುವ ವೈದ್ಯ ಹುದ್ದೆಗಳ ಸಂಖ್ಯೆ ೯೬ ವಿವರಗಳು ಈ ಕೆಳಕಂಡಂತೆ ಇವೆ.

	ಪ್ರಾಧ್ಯಾಪಕರು	ಸಹಾಯಕ ಪ್ರಾಧ್ಯಾಪಕರು	ಉಪನ್ಯಾಸಕರು	ಭೋದಕೇತರ ಸಿಬ್ಬಂದಿ	ಒಟ್ಟು
ಸೇವೆ ಸಲ್ಲಿಸುತ್ತಿರುವ ವೈದ್ಯರುಗಳ ಸಂಖ್ಯೆ	೩೧	೩೨	೪೮	೨೫	೧೩೬
ಖಾಲಿ ಇರುವ ವೈದ್ಯ ಹುದ್ದೆಗಳ ಸಂಖ್ಯೆ	೧೮	೨೪	೫೪	—	೯೬

ಆ) ಹಾಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಕೆ.ಎಂ.ಸಿ. ಆಸ್ಪತ್ರೆ ಮತ್ತು ಕಾಲೇಜಿಗೆ ೧೯೮೬-೮೭ ರಿಂದ ೧೯೮೮-೮೯ರವರೆಗೆ ಬಿಡುಗಡೆ ಮಾಡಿದ ಅನುದಾನದ ವಿವರಗಳು ಈ ಕೆಳಕಂಡಂತೆ ಇವೆ.

(ರೂ. ಲಕ್ಷಗಳಲ್ಲಿ)

	೧೯೮೬-೮೭	೧೯೮೭-೮೮	೧೯೮೮-೮೯
ಕೆ.ಎಂ.ಸಿ. ಆಸ್ಪತ್ರೆ	೧೬೯.೫೧	೧೭೫.೭೩	೨೦೬.೮೬
ಕೆ.ಎಂ.ಸಿ. ಕಾಲೇಜು	೧೫೯.೫೧	೧೬೬.೭೦	೨೨೬.೯೩

೧೧-೩೦ ಎ.ಎಂ,

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ದೇಶಮುಖ್ ಅವರು ಈಗತಾನೇ ಆರೋಗ್ಯ ಖಾತೆಯನ್ನು ವಹಿಸಿಕೊಂಡಿದ್ದಾರೆ. ಇದು ಮಾನ್ಯ ಮುಖ್ಯಮಂತ್ರಿಯವರಾದ ಬೊಮ್ಮಾಯಿಯವರ ಮತದಾರರ ಕ್ಷೇತ್ರಕ್ಕೆ ಸಂಬಂಧಪಟ್ಟ ಪ್ರಶ್ನೆ. ಮಾನ್ಯ ಸಚಿವರು ಉತ್ತರ ಕೊಡುವಾಗ ೩೧ ಪ್ರಾಧ್ಯಾಪಕರ ಹುದ್ದೆಗಳಲ್ಲಿ ೧೮ ಖಾಲಿ ಇವೆ ಎಂದು ಹೇಳಿದರು. ಇದು ಒಂದೇ ಒಂದು ಜಿಲ್ಲೆಯಲ್ಲಿರತಕ್ಕ ಭವ್ಯವಾದ ಆಸ್ಪತ್ರೆ. ಈ ಆಸ್ಪತ್ರೆಯಲ್ಲಿ ೩೧ ವೈದ್ಯರ ಬದಲು ೧೮ ಮಂದಿ ವೈದ್ಯರಿದ್ದಾರೆಂದು ಹೇಳಿದ್ದಾರೆ. ಇದು ಆಷ್ಟೆ ಅಲ್ಲ, ಅಲ್ಲಿ ಎಕ್ಸ್‌ರೇ ಇಲ್ಲ. ಸ್ಪೆಷಲ್ ಬ್ಲಡ್ ಎಕ್ಸಾಮಿನೇಷನ್ ವ್ಯವಸ್ಥೆ ಇಲ್ಲ. ಔಷಧ ಇಲ್ಲ, ಆ ಆವರಣದಲ್ಲಿಯೇ ಸೆರೆ ಮಾರಲಿಕ್ಕೆ ಹತ್ತಿದ್ದಾರೆ. ಇದು ಮಾನ್ಯ ಮುಖ್ಯ ಮಂತ್ರಿಗಳ ಮತ್ತು ಆರೋಗ್ಯ ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ನಿಜವಾಗಿಯೂ ಸಹ ಕೆಎಂಸಿ ಆಸ್ಪತ್ರೆಯ ಹತ್ತಿರ ಸಾರಾಯಿ ಮಾರಾಟಕ್ಕೆದ್ದು ನಡೆಯುತ್ತಿದೆ ಅಲ್ಲಿ ಔಷಧ ಎಳ್ಳಷ್ಟು ಇಲ್ಲ. ಬ್ಯಾಂಡೇಜ್ ಇಲ್ಲ, ಬ್ಯಾಂಡೇಜ್ ಮಾಡಿಸಬೇಕೆಂದರೆ ಅರಿವೆ ತೆಗೆದು ಕೊಂಡು ಬನ್ನಿ ಎಂದು ಹೇಳುತ್ತಾರೆ. ಇವೊತ್ತು ವೈದ್ಯ ಹುದ್ದೆಗಳಿಗೆ ಜನರು ಸಿಕ್ಕುವುದಿಲ್ಲ ಅಂದರೆ ಆಡ್ಡಿ ಇಲ್ಲ. ಖಾಲಿ ಇರತಕ್ಕ ಹುದ್ದೆಗಳಿಗೆ ತುಂಬಬೇಕಂ ಅಂದರೆ ಬೇಕಾದಷ್ಟು ಜನ ಡಾಕ್ಟರುಗಳು ಸಿಕ್ಕುತ್ತಾರೆ. ಏತಕ್ಕಾಗಿ ಇನ್ನೂ ಖಾಲಿ ಹುದ್ದೆಗಳನ್ನು ತುಂಬದೇ ಹಾಗೆ ಬಿಟ್ಟಿದ್ದೀರಿ ? ನಿಮ್ಮಲ್ಲಿ ಹಣ ಇಲ್ಲದೇ ಇದ್ದರೆ ಆಸ್ಪತ್ರೆಯನ್ನಾದರೂ ಬಂದ್ ಮಾಡಿ. ನೀವು ಬರೀ ಎಕ್ಸ್‌ಪೀರಿಯಾ, ಬೌರಿಂಗ್ ಆಸ್ಪತ್ರೆಗಳನ್ನೇ ನಡೆಸುವುದು ಇದ್ದರೆ ಜಿಲ್ಲಾ ಆಸ್ಪತ್ರೆಗಳನ್ನು ಬಂದ್ ಮಾಡಿ. ಈ ರೀತಿಯ ಪರಿಸ್ಥಿತಿ ಇರುವಾಗ ಮಾನ್ಯ ದೇಶಮುಖ್ ಅವರಿಗೆ ಈ ಆರೋಗ್ಯ ಖಾತೆಯನ್ನು ಕೊಟ್ಟು ಅವರ ಮೇಲೆ ಗೂಬೆ ಕೂರಿಸಲಿಕ್ಕೆ ಪ್ರಯತ್ನ ಮಾಡಬೇಡಿ ಈಗ ಈ ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಮಾನ್ಯ ಮಂತ್ರಿ ಮಂತ್ರಿಗಳೇ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲರು ಹೇಳಿದಂಥ ಕೆಲವು ವಿಚಾರಗಳಲ್ಲಿ ಸತ್ಯಾಂಶ ಇದೆ. ಇತ್ತೀಚೆಗೆ ಒಂದು ವರ್ಷದಿಂದ ಒಂದು ಆಜ್ಞೆಯನ್ನು ಮಾಡಿದ್ದೇವೆ. ಮೊದಲಿಂದಲೂ ಬಳ್ಳಾರಿ, ಹುಬ್ಬಳ್ಳಿ ಆಸ್ಪತ್ರೆಗಳಿಗೆ ಬಹುತೇಕವಾಗಿ ಡಾಕ್ಟರ್ಸ್ ಹೋಗುತ್ತಿರಲಿಲ್ಲ ಎನ್ನುವ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಾನು ವಿರೋಧಪಕ್ಷದ ನಾಯಕನಾಗಿದ್ದಾಗಿನಿಂದತಲೂ ಕೆಎಂಸಿಗೆ ಒಬ್ಬ ಖಾಯಂ ಪ್ರಿನ್ಸಿಪಾಲ್ ಹಾಕಿಸಬೇಕೆಂದು ಪ್ರಯತ್ನ ಮಾಡಿದ್ದು, ನಾನು ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಆಲ್ಲಿಗೆ ಖಾಯಂ ಪ್ರಿನ್ಸಿಪಾಲ್ ಹಾಕಲಿಕ್ಕೆ ಆಗಿಲ್ಲ ಇಲ್ಲಿ ನಡೆಯತಕ್ಕ ಆಡಳಿತ ವೈಖರಿ, ಆದರೆ ನಾನು ಸುಮ್ಮನೆ ಕುಳಿತುಕೊಂಡಿಲ್ಲ, ಒಬ್ಬರಿಗೆ ಫೋಸ್ಟ್ ಮಾಡಿದಾಗ

ಅವರು ಅಲ್ಲಿಗೆ ಹೋಗಲಿಲ್ಲ ಅಂದರೆ ಅವರ ಮೇಲೆ ಡಿಸಿಪ್ಲಿನ್ ಆ್ಯಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಈ ರೀತಿ ಪೋಸ್ಟ್ ಮಾಡಿದಾಗ ಮೂರು ಜನರು ರಾಜೀನಾಮೆ ಕೊಟ್ಟು ಹೋದರು. ಈಗ ನಾಲ್ಕನೆಯವರನ್ನು ಪೋಸ್ಟ್ ಮಾಡಿದ್ದೇವೆ. ಅವರು ಮೂರು ತಿಂಗಳು ಕಾಲ ರಜೆ ಹಾಕಿರುವಂತಾದ್ದಾಗಿದೆ. ಅವರು ಅಲ್ಲಿಗೆ ಹೋಗದಿದ್ದರೆ, ಅವರೂ ಸಹ ರಾಜೀನಾಮೆ ಕೊಡಬೇಕಾಗುತ್ತದೆ, ಇಲ್ಲದೇ ಹೋದರೆ ಅವರನ್ನು ಡಿಸ್‌ಮಿಸ್ ಮಾಡಬೇಕಾಗುತ್ತದೆ. ಎರಡು ವರ್ಷಗಳಿಂದ ಅಲ್ಲಿರತಕ್ಕ ಪ್ರಿನ್ಸಿಪಾಲ್ ಇನ್‌ಚಾರ್ಜ್ ಯಾಗಿದ್ದಾರೆ ಅವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಆಸ್ಪತ್ರೆಯಲ್ಲಿ ಉತ್ತಮವಾದ ಕೆಲಸವಾಡಿ ಅಲ್ಲಿ ಶಿಸ್ತನ್ನು ತಂದಿದ್ದಾರೆ. ಈಗ ಪ್ರಮೋಷನ್ ಆದವರನ್ನು ಬಳ್ಳಾರಿ, ಹುಬ್ಬಳ್ಳಿಗೆ ಹಾಕಿದ್ದೇವೆ. ಪ್ರಮೋಷನ್ ಆದವರು ಹುಬ್ಬಳ್ಳಿ, ಬಳ್ಳಾರಿಗೆ ಹೋಗಲೇ ಬೇಕಾಗುತ್ತದೆ. ಆದರಲ್ಲೂ ಒಂದೊಂದರ ಬಗ್ಗೆ ಬಹಳ ಒತ್ತಡ, ಪರ್ಚಸ್ಸಿನ ಎಲ್ಲಾ ಕಡೆಯಿಂದ ಇರುತ್ತದೆ, ಕಷ್ಟ ಇದೆ ಅಂದರೆ ಒಬ್ಬಿಬ್ಬರನ್ನು ಬಿಡಬಹುದು. ಒಟ್ಟಿನಲ್ಲಿ ಆ ನೀತಿಯನ್ನು ನಾವು ರೂಪಿಸಿಕೊಂಡಿದ್ದೇವೆ, ಆದಷ್ಟು ಬೇಗ ಹುಬ್ಬಳ್ಳಿ, ಬಳ್ಳಾರಿ ಎರಡೂ ಆಸ್ಪತ್ರೆಗಳಿಗೂ ವೈದ್ಯರುಗಳನ್ನು ಕಳುಹಿಸುವಂಥಾದ್ದು ಮಾಡುತ್ತೇವೆ. ಇನ್ನೊಂದು ವಿಷಯ ಅಂದರೆ ಬಡ್ಜೆಟ್‌ನಲ್ಲಿ ಹಣ ಕೊಡುವಾಗ ವಿಕ್ಟೋರಿಯಾ ಆಸ್ಪತ್ರೆ ಆಗಲಿ, ಮೈಸೂರು ಆಸ್ಪತ್ರೆ ಆಗಲಿ, ಹುಬ್ಬಳ್ಳಿ ಆಸ್ಪತ್ರೆಯಾಗಲಿ, ಬಳ್ಳಾರಿ ಆಸ್ಪತ್ರೆಯಾಗಲಿ, ಎಲ್ಲಿರತಕ್ಕ ಬೆಡ್ ಸ್ಟ್ರೆಂತ್ ಮೇಲೆ ಕೊಡಬೇಕಾಗುತ್ತದೆ. ಇದುವರೆಗೂ ೧೦ ಪರ್‌ಸೆಂಟ್ ಪ್ರತಿಯೊಂದು ಆಸ್ಪತ್ರೆಗೂ ಹೆಚ್ಚು ಮಾಡುವಂತಾದ್ದು ಏನಿತ್ತು ಅದರಿಂದ ಎಲ್ಲಾ ಆಸ್ಪತ್ರೆಗಳಿಗೂ ನ್ಯಾಯವಾಗಿ ಹಣ ಒದಗಿಸಿದಂತೆ ಆಗುತ್ತಾ ಇರಲಿಲ್ಲ. ಈ ವರ್ಷ ಬೆಡ್ ಸ್ಟ್ರೆಂತ್ ಮೇಲೆ ಎಲ್ಲಾ ಆಸ್ಪತ್ರೆಗಳಿಗೂ ಕೊಡಬೇಕು ಎಂದು ಆ ನೀತಿಯನ್ನು ಅಳವಡಿಸಿಕೊಂಡಿದ್ದೇವೆ. ಅದೇ ರೀತಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಮಾನ್ಯ ಪಾಟೀಲರು ಹೇಳಿರುವಂತಾದ್ದು ಬಹಳ ಮುಖ್ಯ ಇದೆ. ಅವರು ಹೇಳಿರತಕ್ಕ ಆಸ್ಪತ್ರೆಗೆ ಗಮನ ಕೊಡಬೇಕಾಗಿದೆ, ನಾವು ಗಮನ ಕೊಡುತ್ತೇವೆ.

ಶ್ರೀ ಕೆ. ಪೆಚ್. ಪಾಟೀಲ್.—ಮುಖ್ಯವಾಗಿ ಇಲ್ಲಿ ಎಕ್ಸ್‌ರೇ ಇಲ್ಲ. ಬ್ಯಾಂಡೇಜ್‌ನ್ನು ಕಟ್ಟುವುದಕ್ಕೆ ಅವರ ಹತ್ತಿರ ಅರಿವೆ ಇಲ್ಲ. ಇದನ್ನೆಲ್ಲಾ ಸರಬರಾಜು ಮಾಡುವುದಕ್ಕೆ ನೀವು ವ್ಯವಸ್ಥೆ ಮಾಡುತ್ತೀರಾ ? ಮತ್ತು ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುವುದಕ್ಕೆ ಆದೇಶವನ್ನು ಕೊಡುತ್ತೀರಾ ?

ಶ್ರೀ ಎಸ್. ಆರ್ ಬೊಮ್ಮಾಯಿ.—ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುವುದಕ್ಕೆ ಆದೇಶವನ್ನು ಕೊಟ್ಟಿದ್ದೇನೆ. ಮತ್ತು ತಾವು ಏನು ಉಳಿದ ವಿಚಾರಗಳನ್ನು ಹೇಳಿದ್ದೀರಿ ಅವುಗಳ ಬಗ್ಗೆ ನಾನು ಗಮನಹರಿಸುತ್ತೇನೆ.

ತೋಟಗಾರಿಕೆ ತರಬೇತಿ ಕೇಂದ್ರ

೧೩೭. ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ),—ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತೋಟಗಾರಿಕೆ ಇಲಾಖೆಯವರು ಪ್ರತಿ ವರ್ಷ ತೋಟಗಾರಿಕೆಯ ಅನುಭವ ನೀಡುವ ತರಬೇತಿ ಕೊಡುತ್ತಿರುವರೆ ?

ಆ) ಪ್ರತಿ ವರ್ಷ ಪ್ರತಿ ಜಿಲ್ಲೆಯಲ್ಲಿ ಪ್ರತಿ ತರಬೇತಿ ಕೇಂದ್ರಗಳಿಂದ ತರಬೇತಿ ಪಡೆಯುವ ಯುವಕರ, ಯುವತಿಯರ ಸಂಖ್ಯೆ ಎಷ್ಟು ಹಾಗೂ ಎಷ್ಟು ತಿಂಗಳ ತರಬೇತಿ ನೀಡಲಾಗುತ್ತಿದೆ ?

ಇ) ಇಂತಹ ತರಬೇತಿಯ ಅವಧಿಯಲ್ಲಿ ಅವರಿಗೆ ನೀಡುವ ಸ್ಟೈಫಂಡ್ ಸವಲತ್ತೆಷ್ಟು ಹಾಗೂ ಇವರಿಗೆ ತರಬೇತಿಯ ನಂತರ ಅರ್ಹತೆ ಸರ್ಟಿಫಿಕೇಟ್ ನೀಡಲಾಗುತ್ತಿದೆಯೇ ? ವಿವರ ನೀಡುವುದು.

ಶ್ರೀ ಬಿ. ಬಿ. ನಿಂಗಯ್ಯ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಹೌದು.

ಆ) ತರಬೇತಿಯನ್ನು ಯುವಕರಿಗೆ ಮಾತ್ರ ನೀಡಲಾಗುತ್ತಿದೆ. ಜಿಲ್ಲಾವಾರು ಮತ್ತು ತರಬೇತಿ ಕೇಂದ್ರುಗಳ ಪಟ್ಟಿಯನ್ನು ಲಗತ್ತಿಸಲಾಗಿದೆ (ಅನುಬಂಧ–೧). ತರಬೇತಿಯ ಅವಧಿ ೧೦ ತಿಂಗಳು. (ಮೇ ತಿಂಗಳಿಂದ ಫೆಬ್ರುವರಿ ತಿಂಗಳವರೆಗೆ).

ಇ) ಪ್ರತಿ ತರಬೇತಿ ಅಭ್ಯರ್ಥಿಗೆ ರೂ. ೨೦೦-೦೦ ಮಾಹೆಯಾನ ಸ್ಟೈಫಂಡ್ ನೀಡಲಾಗುತ್ತಿದೆ. ಅರ್ಹತೆ ಸರ್ಟಿಫಿಕೇಟ್‌ನ್ನು ನೀಡಲಾಗುತ್ತಿದೆ. ವಿವರಗಳನ್ನು ಅನುಬಂಧ–೨ರಲ್ಲಿ ಲಗತ್ತಿಸಲಾಗಿದೆ.